ಇಟ್ಟುಕೊಂಡಿತ್ತು. ಡಿಸೆಂಬರ್ 8ರವರೆಗೆ ಅದನ್ನು ಹೊರಗೆಡವಲೇ ಇಲ್ಲ. ಈಗ ಅಂತರರಾಷ್ಟ್ರೀಯ ಪರಿಣತರು ಹೇಳುವಂತೆ ಈ ಎರಡೂ ದೇಶಗಳು ಘೋಷಿಸಿರುವ ಎವರೆಸ್ಟ್ ಶಿಖರದ ಎತ್ತರ 8,848.86 ಮೀಟರ್ ಮುಂದೆ ಅಧಿಕೃತವಾಗಿ ಬಳಕೆಯಾಗಲಿದೆ.

## ತುರ್ತು ಏನಿತ್ತು?

ನೇಪಾಳ ಮತ್ತು ಚೀನಾ ಎರಡೂ ದೇಶಗಳು ತರಾತುರಿಯಲ್ಲಿ ಎವರೆಸ್ಟ್ ಶಿಖರದ ಎತ್ತರ ಅಳೆಯಲು ಹೊರಟಿದ್ದೇಕೆ? ವಾಸ್ತವವಾಗಿ ಯಾವ ದೇಶಗಳೂ ಭಾರತ ಹಿಂದೆ ಮಾಡಿದ್ದ ಲೆಕ್ಕಾಚಾರವನ್ನು ಪ್ರಶ್ನಿಸಿರಲಿಲ್ಲ. ಇಲ್ಲಿ ಬೇರೆಯದೇ ಆದ ವಿಚಾರವಿದೆ. 2015ರಲ್ಲಿ ನೇಪಾಳ ಮಹಾ ಭೂಕಂಪನಕ್ಕೆ ಒಳಗಾಯಿತು. ಇದನ್ನು ಕಠ್ಮಂಡು ಭೂಕಂಪನವೆಂದೇ ಈಗಲೂ ಕರೆಯುತ್ತಾರೆ. ಕ್ಷಣಾರ್ಧದಲ್ಲಿ ಹಲವು ಬಿಲಿಯನ್ ರೂಪಾಯಿ ಆಸ್ತಿ ನಷ್ಟವಾಯಿತು, 9000 ಜನರ ಪ್ರಾಣಹಾನಿಯಾಯಿತು. ಹಿಮಾಲಯ ನಡುಗಿತ್ತು, ಮೈ ಕೊಡವಿಕೊಂಡಿತ್ತು. ಈ ಕಾರಣವಾಗಿ ಅನೇಕ ಕಡೆ ಹಿಮದ ಸ್ತರಗಳು ದೊಪ್ಪೆಂದು ಬಿದ್ದಿದ್ದವು. ಇದು ಎರಡೂ ದೇಶಗಳಿಗೆ ಗಾಬರಿ ಹುಟ್ಟಿಸಿತ್ತು. ಒಂದುವೇಳೆ ಎವರೆಸ್ಟ್ ಶಿಖರಕ್ಕೇ ಇದರಿಂದ ಧಕ್ಕೆಯಾಗಿದ್ದರೆ ಅದು ಈ ಎರಡೂ ದೇಶದ ಪ್ರವಾಸದ ಮೇಲೆ ಬಹು ದೊಡ್ಡ ಆರ್ಥಿಕ ಹೊಡೆತ ಕೊಡುತ್ತಿತ್ತು. ಜಗತ್ತಿನ ಅತಿ ಎತ್ತರದ ಶಿಖರ ಎಂಬ ಖ್ಯಾತಿ ಎಲ್ಲಿ ಮಣ್ಣುಪಾಲಾಗುತ್ತದೋ ಎಂಬ ಒಳಗಿನ ಭಯ ಮತ್ತೆ ಸಮೀಕ್ಷೆಮಾಡಿ ವಾಸ್ತವಾಂಶವನ್ನು ಅಳೆಯುವ ತುರ್ತು ನಿರ್ಮಿಸಿತ್ತು. ಅಷ್ಟರಮಟ್ಟಿಗೆ ಎರಡೂ ದೇಶಗಳಿಗೆ ಒತ್ತಡವಿತ್ತು.

ಚೀನಾ ಮತ್ತು ನೇಪಾಳ ಪರಸ್ಪರ ಹತ್ತಿರ ಬರುವಂತೆ ಎರಡೂ ದೇಶಗಳು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿವೆ. ಭಾರತದ ಮೇಲಿನ ಅತಿ ಅವಲಂಬನೆ ಬೇಡ ಎನ್ನುವುದು ನೇಪಾಳದ ಇರಾದೆ. ಇದನ್ನು ಬಳಕೆ ಮಾಡಿಕೊಂಡು ಚೀನಾ, ನೇಪಾಳದ ಬಹು ದೊಡ್ಡ ಯೋಜನೆಗಳಿಗೆ ನೆರವಾಗುತ್ತಿದೆ. ಯಾರಾದರೂ ರಸಪ್ರಶ್ನೆಯಲ್ಲಿ ನಿಮ್ಮನ್ನು 'ಎವರೆಸ್ಟ್ ಶಿಖರ ಭೌಗೋಳಿಕವಾಗಿ ಯಾವ ದೇಶಕ್ಕೆ ಸೇರುತ್ತದೆ' ಎಂದು ಕೇಳಿದರೆ ಉತ್ತರ ಹೇಳಲು ನಿಮಗೂ ತಬ್ಬಿಬ್ಬಾಗಬಹುದು. ನಿಜವಾದ ಉತ್ತರವೆಂದರೆ ಎರಡೂ ದೇಶಗಳಿಗೆ ಸೇರಿದೆ. ಎವರೆಸ್ಟ್ ತಲಪಲು ಎರಡು ಮಾರ್ಗಗಳಿವೆ. ನೇಪಾಳದ ಮಾರ್ಗವಾಗಿ ಹೋಗುವುದು ಇದ್ದುದರಲ್ಲಿ ಸುಲಭ. ಇದನ್ನು ಎವರೆಸ್ಟ್ ಶಿಖರದ 'ಆಗ್ನೇಯ ಏಣು' ಎನ್ನುತ್ತಾರೆ. ಹಾಗೆಯೇ ಟಿಬೆಟ್‌ನಿಂದ ಹೋಗುವುದಾದರೆ ಉತ್ತರದ ಏಣಿನ ಮೂಲಕ ಸಾಗಬೇಕು. ಹೆಚ್ಚಿನ ಪರ್ವತಾರೋಹಿಗಳು ನೇಪಾಳದ ಮೂಲಕ ಪರ್ವತಾರೋಹಣ ಮಾಡಲು ಬಯಸುತ್ತಾರೆ. ಪ್ರವಾಸದ ದೃಷ್ಟಿಯಿಂದ ಹೆಚ್ಚಿಗೆ ಹಣ ಗಳಿಸುತ್ತಿರುವುದು ನೇಪಾಳವೇ. ಆದರೂ ಚೀನಾದ ಕೆಲವು ಮುಲಾಜುಗಳಿಗೆ ಒಳಪಟ್ಟಿರುವ ನೇಪಾಳ 1961ರಲ್ಲಿ ಚೀನಾದೊಡನೆ ಒಂದು ಒಪ್ಪಂದ ಮಾಡಿಕೊಂಡಿತು. ಅದೆಂದರೆ ಎವರೆಸ್ಟ್ ನೆತ್ತಿಯನ್ನು ಹಾಯುವಂತೆ ಎರಡೂ ದೇಶಗಳ ಗಡಿರೇಖೆ ಸಾಗುವುದು; ಉಭಯತ್ರರಿಗೂ ಲಾಭ. ವಾಸ್ತವವಾಗಿ ನೇಪಾಳಕ್ಕೆ ಪರ್ವತಾರೋಹಣ ಹಲವು ಬಿಲಿಯನ್ ಡಾಲರ್ ವಾರ್ಷಿಕ ಆದಾಯ ತರುತ್ತಿದೆ. 54,000 ಶೆರ್ಪಾಗಳು ಎವರೆಸ್ಟ್ ಪರ್ವತಾರೋಹಿಗಳಿಗೆ ನೆರವಾಗುವುದರ ಮೂಲಕ ತಮ್ಮ ಜೀವನ ಸಾಗಿಸುತ್ತಿದ್ದಾರೆ. 2019ರಲ್ಲಿ ನೇಪಾಳಕ್ಕೆ ಭೇಟಿಕೊಟ್ಟ ಚೀನಾದ ಅಧ್ಯಕ್ಷರು, 'ಎವರೆಸ್ಟ್ ಶಿಖರದ ಸಮೀಕ್ಷೆಯ ಫಲಿತಾಂಶವನ್ನು ಒಟ್ಟಿಗೇ ಪ್ರಕಟಿಸೋಣ, ಒಂದೇ ತೀರ್ಮಾನಕ್ಕೆ ಬರೋಣ' ಎಂದು ನೇಪಾಳವನ್ನು ಒಪ್ಪಿಸುವುದರಲ್ಲಿ



ಜಿ.ಪಿ.ಎಸ್. ಸ್ಟೇಷನ್



ಎವರೆಸ್ಟ್ ಏರಲು ನೂಕುನುಗ್ಗಲು